# ಶ್ರೀರಾಮಕೃಷ್ಣ ವಚನವೇದದಿಂದ



## ಆತ್ಮಜಾಗೃತಿ

ಯಾರಿಗೆ ಆತ್ಮಜಾಗೃತಿ ಉಂಟಾಗಿದೆಯೋ ಅವರ ಕಾಲು ತಪ್ಪು ಹೆಜ್ಜೆಯನ್ನಿಡುವುದಿಲ್ಲ. ಅವರು ವಿಚಾರಮಾಡಿ ಪಾಪ ಕಾರ್ಯಗಳನ್ನು ತ್ಯಾಗಮಾಡಬೇಕಾಗಿರುವುದಿಲ್ಲ. ಅವರಿಗೆ ಭಗವಂತನ ಮೇಲೆ ಅಷ್ಟೊಂದು ಪ್ರೀತಿ, ಅವರು ಯಾವ ಕರ್ಮ ಮಾಡಿದರೂ ಅದು ಸತ್ಕರ್ಮವೇ ಆಗಿರುತ್ತದೆ. ಅವರಿಗೆ ಚೆನ್ನಾಗಿ ಗೊತ್ತಿದೆ, ಕರ್ಮಗಳ ಕರ್ತೃ ತಾವಲ್ಲ, ತಾವು ಕೇವಲ ಭಗವಂತನ ದಾಸರು ಎಂಬುದಾಗಿ. ಅವರು ಸತತ ಭಾವಿಸುತ್ತಾರೆ: "ನಾನು ಯಂತ್ರ, ಆತ ಯಾಂತ್ರಿಕ. ಆತ ಮಾಡಿಸಿದ ಹಾಗೆ ಮಾಡುತ್ತೇನೆ, ನುಡಿಸಿದ ಹಾಗೆ ನುಡಿಯುತ್ತೇನೆ, ನಡೆಸುವ ಹಾಗೆ ನಡೆಯುತ್ತೇನೆ."

ಯಾರಲ್ಲಿ ಆತ್ಮಜಾಗೃತಿಯುಂಟಾಗಿದೆಯೋ ಯಾರಿಗೆ ಭಗವಂತನೊಬ್ಬನೇ ಸತ್, ಉಳಿದುದೆಲ್ಲಾ ಅಸತ್ ಎಂದರೆ ಅನಿತ್ಯ ಎಂಬ ಬೋಧೆಯಾಗಿರುವುದೋ, ಅವರ ಭಾವವೇ ಬೇರೆ. ಅವರಿಗೆ ಗೊತ್ತಿದೆ, ಭಗವಂತನೊಬ್ಬನೇ ಏಕಮಾತ್ರ ಕರ್ತಾ, ಉಳಿದವರೆಲ್ಲ ಅಕರ್ತರು ಎಂಬುದಾಗಿ. ಯಾರಿಗೆ ಆತ್ಮಜಾಗೃತಿಯುಂಟಾಗಿದೆಯೋ ಅವರು ಪಾಪಪುಣ್ಯಗಳಿಗೆ ಅತೀತರು. ಅವರ ಕಣ್ಣಿಗೆ ಬೀಳುತ್ತದೆ, ಭಗವಂತನೇ ಎಲ್ಲವನ್ನೂ ಮಾಡುತ್ತಿರುವುದು.

ಒಂದು ಜಾಗದಲ್ಲಿ ಒಂದು ಆಶ್ರಮ ಇತ್ತು. ಅಲ್ಲಿನ ಸಾಧುಗಳು ದಿನವೂ ಮಧುಕರಿಗೆ ಹೋಗುತ್ತಿದ್ದರು. ಒಂದು ದಿನ ಒಬ್ಬ ಸಾಧು ಮಧುಕರಿಗೆ ಹೋಗಿದ್ದಾಗ ಒಬ್ಬ ಜಮೀನುದಾರ ಒಬ್ಬನನ್ನು ಬಹಳವಾಗಿ ಹೊಡೆಯುತ್ತಿದ್ದುದನ್ನು ನೋಡಿದ. ಸಾಧು ಒಳ್ಳೆ ಪರಮ ದಯಾಳು. ಆತ ಅಡ್ಡಲಾಗಿ ಬಂದು ಹೊಡೆಯಬೇಡವೆಂದು ಹೇಳಿದ. ಆ ಜಮೀನುದಾರನ ಕೋಪ ಬಹಳವಾಗಿ ಕೆರಳಿತ್ತು. ಅದನ್ನು ಆತ ಆ ಬಡ ಸಾಧುವಿನ ಕಡೆಗೆ ತಿರುಗಿಸಿದ. ಆತ ಆ ಸಾಧುವಿಗೆ ಯಾವ ರೀತಿ ಹೊಡೆದನೆಂದರೆ ಆ ಸಾಧುವಿನ ಪ್ರಜ್ಞೆ ತಪ್ಪಿ ನೆಲಕ್ಕೆ ಬಿದ್ದ! ಯಾರೋ ಬಂದು ಈ ಸಮಾಚಾರವನ್ನು ಆಶ್ರಮಕ್ಕೆ ತಿಳಿಸಿದರು. ಸಾಧುಗಳು ಓಡಿ ಬಂದು ನೋಡುತ್ತಾರೆ, ತಮ್ಮ ಸೋದರ ಸಂನ್ಯಾಸಿ ಪ್ರಜ್ಞೆತಪ್ಪಿ ಬಿದ್ದಿದ್ದಾನೆ. ಅವರಲ್ಲಿ ನಾಲ್ಕೈದು ಜನ ಸೇರಿಕೊಂಡು ಆತನನ್ನು ಆಶ್ರಮಕ್ಕೆ ಎತ್ತಿಕೊಂಡು ಹೋಗಿ ಹಾಸಿಗೆ ಮೇಲೆ ಮಲಗಿಸಿದರು. ಆತನಿಗೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ. ಉಳಿದ ಸಾಧುಗಳು ಚಿಂತಾಕ್ರಾಂತರಾಗಿ ಆತನ ಸುತ್ತಲೂ ಕುಳಿತುಕೊಂಡರು. ಕೆಲವರು ಆತನಿಗೆ ಗಾಳಿ ಬೀಸಲಾರಂಭಿಸಿದರು. ಅವರಲ್ಲಿ ಒಬ್ಬ ಸಲಹೆ ಕೊಟ್ಟ, ಬಾಯಿಗೆ ಸ್ವಲ್ಪ ಹಾಲು ಬಿಡುವುದು ಒಳ್ಳೆಯದು ಎಂದು. ಬಾಯಿಗೆ ಹಾಲು ಬಿಡುತ್ತಿದ್ದಂತೆ ಆ ಸಾಧು ಚೇತರಿಸಿಕೊಳ್ಳಲಾರಂಭಿಸಿದ. ಕಣ್ಣುಬಿಟ್ಟು ದಿಟ್ಟಿಸಿ ನೋಡಲಾರಂಭಿಸಿದ. ಒಬ್ಬ ಸಾಧು ಕೇಳಿದ: "ಮಹಾರಾಜ್, ನಿಮಗೆ ಹಾಲು ಯಾರು ಕುಡಿಸುತ್ತಾ ಇದ್ದಾರೆ?" ಆ ಸಾಧು ಮೆಲ್ಲ ಮೆಲ್ಲಗೆ ಉಸಿರೆಳೆದು ಹೇಳಿದ : "ಸೋದರ, ಯಾರು ನನ್ನನ್ನು ಬಡಿದು ಹಾಕಿದನೋ ಆತನೇ ಈಗ ಹಾಲು ಕುಡಿಸುತ್ತಿದ್ದಾನೆ."

ಆತ್ಮಜಾಗೃತಿ ಆಗದ ಹೊರತು ಈ ರೀತಿಯ ಮಾನಸಿಕ ಅವಸ್ಥೆ ಉಂಟಾಗದು. ಎಲ್ಲರಿಗೂ ಬ್ರಹ್ಮಜ್ಞಾನ ಸಾಧ್ಯ. ಜೀವಾತ್ಮ ಪರಮಾತ್ಮ ಎಂಬ ಎರಡು ವಸ್ತುಗಳು ಇವೆ. ಪ್ರಾರ್ಥನೆಯಿಂದ ಜೀವಾತ್ಮ ಪರಮಾತ್ಮನೊಡನೆ ಐಕ್ಯವಾಗಲು ಸಾಧ್ಯ. ಗ್ಯಾಸ್ ಕಂಪನಿಯವರು ಪ್ರತಿಯೊಂದು ಮನೆಗೂ ತಮ್ಮ ಕೊಳವೆಯನ್ನು ಕೊಡಿಸಿದ್ದಾರೆ. ಗ್ಯಾಸನ್ನು ಕಂಪನಿಯಿಂದ ಪಡೆದುಕೊಳ್ಳಬಹುದು. ಕಂಪನಿಗೆ ಒಂದು ಅರ್ಜಿಹಾಕಿಕೊಂಡರೆ ಅವರು ಗ್ಯಾಸ್ ಸರಬರಾಜು ಮಾಡುತ್ತಾರೆ. ಬಳಿಕ ಮನೆಗಳಲ್ಲಿ ದೀಪ ಹೊತ್ತಿಸಿಕೊಳ್ಳಬಹುದು. ಕೆಲವರಲ್ಲಿ ಆಗಲೇ ಆತ್ಮಜಾಗೃತಿ ಉಂಟಾಗಿಬಿಟ್ಟಿರುತ್ತದೆ. ಅವರಲ್ಲಿ ಒಂದು ವಿಶೇಷ ಗುಣ ನೋಡಬಹುದು. ಭಗವತ್ಸಂಬಂಧವಾದ ಮಾತುಕತೆ ವಿನಾ ಬೇರೆ ಏನೂ ಅವರಿಗೆ ರುಚಿಸದು. ಅವರು ಚಾತಕಪಕ್ಷಿಯ ಹಾಗೆ. ಏಳು ಸಮುದ್ರಗಳಲ್ಲಿ, ಗಂಗೆಯಲ್ಲಿ, ಯಮುನೆಯಲ್ಲಿ ಉಳಿದ ನದಿಗಳಲ್ಲಿ ನೀರು ಸುಮ್ಮನೆ ತುಂಬಿದೆ. ಅದಕ್ಕೆ ಬೇಕಾಗಿರುವುದು ಮಳೆ ನೀರು. ನೀರಡಿಕೆಯಿಂದ ಗಂಟಲು ಒಣಗಿ ಸಾಯುತ್ತಿದ್ದರೂ ಅದು ಬೇರೆ ಯಾವ ನೀರನ್ನೂ ಕುಡಿಯದು.

ಭಗವಂತನ ಸಂಬಂಧವಾಗಿ ಏಕೆ ಹೀಗೆ ಎಂಬುದನ್ನು ಅರಿಯಲು ಸಾಧ್ಯವಾಗುವುದೇ? ನಾನೂ ಕೆಲವು ವೇಳೆ ಆತ ಒಳ್ಳೆಯವ ಅಂತ ಭಾವಿಸುತ್ತೇನೆ. ಇನ್ನು ಕೆಲವು ವೇಳೆ ಕೆಟ್ಟವ ಅಂತ ಭಾವಿಸುತ್ತೇನೆ. ಆತ ನಮ್ಮನ್ನು ತನ್ನ ಮಾಯೆಯಿಂದ ಮುಗ್ಗಗೊಳಿಸಿ ಇಟ್ಟಿದ್ದಾನೆ. ಕೆಲವು ವೇಳೆ ನಮ್ಮನ್ನು ಎಚ್ಚರಗೊಳಿಸುತ್ತಾನೆ, ಇನ್ನು ಕೆಲವು ವೇಳೆ ನಮಗೆ ಮರೆವು ತರುತ್ತಾನೆ. ಈ ನಿಮಿಷ ಅಜ್ಞಾನ ಒಮ್ಮೆಗೇ ಹೊರಟುಹೋಗುತ್ತದೆ. ಮರು ನಿಮಿಷ ಮತ್ತೆ ಬಂದು ಮುಚ್ಚಿಕೊಳ್ಳುತ್ತದೆ. ಪಾಚಿ ಮುಚ್ಚಿಕೊಂಡಿರುವ ಕೊಳಕ್ಕೆ ಕಲ್ಲು ಬಿಸಾಡಿದರೆ, ನೀರಿನ ಸ್ವಲ್ಪ ಭಾಗ ಕಾಣಿಸಿಕೊಳ್ಳುತ್ತದೆ. ಆದರೆ ಕೆಲವು ಕ್ಷಣದೊಳಗೇ ಮತ್ತೆ ಪಾಚಿ ನರ್ತಿಸುತ್ತಾ ಬಂದು ಆ ಭಾಗವನ್ನು ಮುಚ್ಚಿಕೊಂಡು ಬಿಡುತ್ತದೆ. ದೇಹಬುದ್ಧಿ ಇರುವವರೆಗೆ ಸುಖ-ದುಃಖ, ಜನ್ಮ-ಮೃತ್ಯು, ರೋಗ-ಶೋಕ. ಇವೆಲ್ಲಾ ದೇಹಕ್ಕೆ ಸೇರಿದವೇ ವಿನಾ ಆತ್ಮಕ್ಕಲ್ಲ. ಈ ಶರೀರ ಸತ್ತುಹೋದಮೇಲೆ ಬಹುಶಃ ಆತ ನಮ್ಮನ್ನು ಉತ್ತಮ ಎಡೆಗೆ ಕರೆದುಕೊಂಡು ಹೋಗಬಹುದು. ಇದು ಪ್ರಸವ ವೇದನೆಯನ್ನು ಅನುಭವಿಸಿದ ನಂತರ ಮಗುವನ್ನು ಪಡೆದುಕೊಳ್ಳುವ ಹಾಗೆ. ಆತ್ಮಜಾಗೃತಿ ಆದ ನಂತರ ಸುಖ -ದುಃಖ, ಜನ್ಮ-ಮೃತ್ಯು ಇವೆಲ್ಲಾ ಸ್ವಪ್ನದ ಹಾಗೆ ಕಾಣುತ್ತವೆ.